ಪ್ರಬಂಧ

# ಎರಡು ಕನಸು




ಡಾ. ಗುರುಪ್ರಸಾದ ಕಾಗಿನೆಲೆ

ಕಲೆ: ಮುರಳೀಧರ್ ರಾಥೋಡ್




ನನಗೆ ಚಿಕ್ಕಂದಿನಿಂದಲೂ ಎರಡು ಕನಸುಗಳು ಸತತವಾಗಿ ಬೀಳುತ್ತಿವೆ. ಈ ಕನಸುಗಳ ಸಾತತ್ಯ ಹೇಗಿದೆಯೆಂದರೆ, ಕೆಲವ್ರೊಮ್ಮೆ ನಿದ್ರೆಯಿಂದ ಎಚ್ಚರವಾಗಿ ನನಗೆ ಬಿದ್ದದ್ದು ಕನಸೋ, ನಿಜವಾಗಿ ನಡೆದದ್ದೋ ಎಂದು ಕೊಂಚ ಗೊಂದಲಗೊಂಡು, ನಾನು ನನ್ನ ಹಾಸಿಗೆಯ ಮೇಲೆಯೇ ಮಲಗಿರುವುದರಿಂದ ಇದು ಕನಸೇ ಇರಬೇಕು ಎಂದು ಮತ್ತೆ ನಿದ್ರೆಮಾಡಿದ್ದೇನೆ. ನಿದ್ರೆ ಹತ್ತಿದ ನಂತರ ಈ ಕನಸುಗಳು ಎಲ್ಲಿ ನಿಂತಿರುತ್ತವ್ರೋ ಅಲ್ಲಿಂದ ಮತ್ತೆ ಪ್ರಾರಂಭವಾಗಿ ಮುಂದುವರೆಯುತ್ತವೆ. ಈ ರೀತಿ ನನ್ನ ರೆಮ್ ನಿದ್ರೆ, ಗೊರಕೆ, ಉಸಿರಾಟ ಸ್ತಂಭನ ಎಲ್ಲ ಹಂತಗಳಿಗೂ ಹೆದರದೆ ಮುಂದುವರೆಯುವ ಈ ಕನಸಿನ ಪರಿಯನ್ನು ಕಂಡು ನಾನು ಗಾಬರಿಯಾಗಿದ್ದೇನೆ. ಅಷ್ಟೇ ಅಲ್ಲ. ಮತ್ತೆ ಮತ್ತೆ ಅವೇ ಕನಸುಗಳು ಬೀಳುವುದರಿಂದ ನನಗೂ ಕೂಡ ಅಕ್ಕಮಹಾದೇವಿಯ ಹಾಗೆ ನನಗೇ ಗೊತ್ತಿರದ ಇಷ್ಟದೈವವಿರಬಹುದೇ ಎಂದು ಅನುಮಾನಪಟ್ಟುಕೊಂಡು ‘ಅಣ್ಣ ಕೇಳಣ್ಣ’ ಎಂದು ನನ್ನ ಸಹೋದ್ಯೋಗಿ ಮನಃಶಾಸ್ತ್ರಜ್ಞರೊಂದಿಬ್ಬರನ್ನು ಕೂಡ ಕೇಳಿದ್ದೇನೆ. ಅವರು ಫ್ರಾಯ್ಡನ ಮತ್ತು ಕಾರ್ಲ್ ಯುಂಗ್‌ನ ಸಿದ್ಧಾಂತಗಳನ್ನು ಉದಾಹರಿಸಿ, ಒಳಮನಸ್ಸು, ಹೊರಮನಸ್ಸು, ಇದ್, ಈಗೋಗಳನ್ನು ಅರ್ಥಮಾಡಿಸಲು ಪ್ರಯತ್ನಿಸಿ ಸೋತಿದ್ದಾರೆ. ಇನ್ನೂ ಹೆಚ್ಚು ಅರ್ಥ ಮಾಡಿಕೊಳ್ಳಲು ಹೋದಾಗ ಬಗೆಬಗೆಯ ಫಿಕ್ಸೇಶನ್‌ಗಳನ್ನು, ಈಡಿಪಸ್ಸು ಮುಂತಾದ ಸಂಕೀರ್ಣತೆಗಳನ್ನು ವಿವರಿಸಿ ಬಾಲ್ಯದಲ್ಲಿ ನನಗಾದ